Date :04-06-2016

quickmarketreports.com

# ಕೋಳಿ ಬೇಡಿಕೆಯಲ್ಲಿ ಏರಿಕೆ ಪೂರೈಕೆಯಲ್ಲಿ ಕೊರತೆ

ಬಿರು ಬಿಸಿಲು ಹಾಗೂ ಬರದ ಪರಿಣಾಮ ಪಶು ಆಹಾರದ ಬೆಲೆ ಏರಿಕೆಯಂಥ ಕಾರಣಗಳಿಂದ ಕೋಳಿಗಳ ಉತ್ಪಾದನೆ ಕಡಿಮೆಯಾಗಿದ್ದು, ಕೋಳಿ ಮಾರುಕಟ್ಟೆ ನಿಶ್ಚಲವಾಗಿ ನಿಲ್ಲುವ ಮಾರುಕಟ್ಟೆಯಲ್ಲಿ ಪ್ರತಿಯೊಂದು ಸಮಯದಲ್ಲಿ ಏರಿಕೆ – ಇಳಿಕೆ ಸಾಮಾನ್ಯ ಆದರೆ ಈ ಬಾರಿಯ ಏರಿಕೆಯಲ್ಲಿ ಕಾರಣ ವಿಪರೀತ ಬಿಸಿಲಿನಿಂದ ಕೋಳಿಯ ತೂಕ ಕಡಿಮೆಯಾಗುವುದು, ಕೋಳಿ ಆಹಾರ, ಔಷಧಗಳ ಬೆಲೆ ಏರಿಕೆ, ಗ್ರಾಹಕರಿಂದ ವಿಪರೀತ ಬೇಡಿಕೆ ಹಾಗೂ ಕೋಳಿ ಪೂರೈಕೆಯ ಕೊರತೆಯಿಂದ ದರ ಏರಿಕೆಯಾಗಿದೆ ಎಂದು ಉದ್ಯಮ ನಡೆಸುತ್ತಿರುವವರ ಅಭಿಪ್ರಾಯ. ರಾಜ್ಯದಲ್ಲಿರುವ ಬರಗಾಲದಿಂದ ಕೋಳಿಯ ಪ್ರಮುಖ ಆಹಾರಗಳಾದ ಮೆಕ್ಕೆ ಜೋಳ, ಸೋಯಾ ಹಿಂಡಿಯ ಬೆಳೆ ಏರಿಕೆ ಕಂಡಿದೆ. ಮುಖ್ಯವಾಗಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಬೆಳೆಯುವ ಜೋಳದ ಇಳುವರಿ ಶೇ20ರಷ್ಟು ಕಡಿಮೆಯಾಗಿದೆ ಎಂದು ತಿಳಿದು ಬಂದಿದೆ. ಕೋಳಿ ಉದ್ಯಮದಲ್ಲಿ ಈ ಬಾರಿ ಬರಗಾಲ ಹಾಗೂ ಬಿಸಿಲಿನ ಹೊಡೆತದಿಂದ ಸಾಕಷ್ಟು ಉತ್ಪಾದನೆ ಕಡಿಮೆಯಾಗಿದೆ. ಮುಖ್ಯವಾಗಿ ಕೋಳಿಯ ತೂಕದಲ್ಲಿ ವಿಪರೀತ ಇಳಿಕೆ ಕಾಣಿಸಿಕೊಂಡಿದೆ. ಈ ಬಾರಿ ಸಾಕಷ್ಟು ಕಾರ್ಯಕ್ರಮಗಳು ಕೋಳಿ ಬೇಡಿಕೆಯನ್ನು ಜಾಸ್ತಿ ಮಾಡಿತ್ತು. ಕೋಳಿ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗದೆ ಇದ್ದಾಗ ಇಂತಹ ದರ ಏರಿಕೆಯಾಗುವ ಸಂಭವ ಬರುತ್ತದೆ ಎಂದು ಉದ್ಯಮದಲ್ಲಿರುವವರ ಅಭಿಪ್ರಾಯ.